ದಿನಾಂಕ:04-04-2022ರಂದು ಯೋಜನೆಯ "ನಿಯೋಜಿತ ಸ್ಥಳ", ಹೆಮ್ಮಡಗಿ ಗ್ರಾಮ, ತಾ|| ಸುರಪುರ ಜಿ|| ಯಾದಗಿರಿಯಲ್ಲಿ ಮಧ್ಯಾಹ್ನ 12.00ಗಂಟೆಗೆ "ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಂಗಳೂರುರವರು ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರು ಹೆಮ್ಮಡಿ ಮರಳು ಬ್ಲಾಕ್ (YDG-10)ರಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ಕೃಷ್ಣಾ ನದಿ ಪಕ್ಕದ ಸರ್ವೆ ನಂ. 92/2, 91/3, 96P, 97, 98 ಮತ್ತು 99, ಹೆಮ್ಮಡಗಿ ಗ್ರಾಮ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 30.00 ಎಕರೆ ಪ್ರದೇಶದಲ್ಲಿ ಪ್ರತಿ ವರ್ಷಕ್ಕೆ 1,12,761 ಟನ್ ಸಾಮರ್ಥ್ಯದ ಮರಳು ಗಣಿಕಾರಿಕೆಯನ್ನು ಅರೆ-ಯಾಂತ್ರಿಕೃತ ಪದ್ಧತಿಯ (Semi-mechanised method) ಪ್ರಕಾರ ಸ್ಥಾಪಿಸಲು ಉದ್ದೇಶಕ್ಕಾಗಿ ಯೋಜನೆಯನ್ನು ಅಭಿವೃದ್ಧಿಪಡಿಸಲು ಪ್ರಸ್ಥಾಪಿಸಿರುವ ಯೋಜನೆಯಿಂದ ಪರಿಸರದ ಮೇಲೆ ಆಗುವ ಪರಿಣಾಮಗಳ ಕುರಿತು ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲು ಜರುಗಿದ ಪರಿಸರ ಸಾರ್ವಜನಿಕ ಆಲಿಕ ಸಭೆಯ ನಡುವಳಿಗಳು:

ಹಾಜರಿದ್ದ ಅಧಿಕಾರಿಗಳು :

ಶ್ರೀಯುತರು:

1) ಡಾ|| ರಾಗಪ್ರಿಯಾ, ಐ.ಎ.ಎಸ್.
   ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಪರಿಸರ ಸಾರ್ವಜನಿಕ ಆಲಿಕೆ ಸಭೆ
   ಯಾದಗಿರಿ ಜಿಲ್ಲೆ, ಯಾದಗಿರಿ.
2) ಶ್ರೀ. ಮಧುಸೂದನ,
   ಹಿರಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕಲಬುರಗಿ.
3) ಶ್ರೀ. ಸುಬ್ಬಣ್ಣ ಜಮಖಂಡಿ, ತಹಸೀಲ್ದಾರರು, ಸುರಪುರ
4) ಶ್ರೀ. ಸುನಿಲ ವ. ಮೂಲಿಮನಿ, ಪಿ.ಎಸ್.ಐ. ಸುರಪುರ
5) ಶ್ರೀ. ಸಣ್ಣವೆಂಕಟೇಶ ಸನಬಾಳ,
   ಉಪ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿ.

*****

ಸಭೆಯ ಪ್ರಾರಂಭದಲ್ಲಿ ಶ್ರೀ ಸಣ್ಣವೆಂಕಟೇಶ ಸನಬಾಳ, ಉಪ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿ ಇವರು ಮಾನ್ಯ ಜಿಲ್ಲಾಧಿಕಾರಿಗಳು, ಯಾದಗಿರಿ ಇವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸುತ್ತಾ ಸದರಿ ಸಭೆಗೆ ಆಗಮಿಸಿದ ಮಂಡಳಿಯ ಹಿರಿಯ ಪರಿಸರ ಅಧಿಕಾರಿಗಳು, ಕರಾಮಾನಿಮಂ, ಕಲಬುರಗಿ ಇವರನ್ನು ವೇದಿಕೆಯ ಮೇಲೆ ಆಸೀನರಾಗುವಂತೆ ಕೋರಿದರು ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ, ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ನ ಎಲ್ಲಾ ಸಿಬ್ಬಂದಿಗಳಿಗೆ, ಯೋಜನೆಯ ತಾಂತ್ರಿಕ ಸಿಬ್ಬಂಧಿಗಳಿಗೆ, ಪೋಲಿಸ್ ಇಲಾಖಾ ಅಧಿಕಾರಿಗಳಿಗೆ, ಆರೋಗ್ಯ ಇಲಾಖೆ ಸಿಬ್ಬಂದಿಯವರಿಗೆ, ಮಾಧ್ಯಮದವರಿಗೆ ಹಾಗೂ ಎಲ್ಲಾ ಸಾರ್ವಜನಿಕರಿಗೆ, ಸಮಸ್ತ ರೈತ ಬಾಂಧವರಿಗೆ ಮತ್ತು ಎಲ್ಲರಿಗೂ ಸ್ವಾಗತವನ್ನು ಕೋರಿದರು.

ಉಪ ಪರಿಸರ ಅಧಿಕಾರಿಗಳು, ಇವರು ಪ್ರಾಸ್ಥಾವಿಕವಾಗಿ ಮಾತನಾಡುತ್ತಾ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರು ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಹೆಮ್ಮಡಗಿ ಗ್ರಾಮದ ಮರಳು ಬ್ಲಾಕ್ (YDG-10)ರಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ಕೃಷ್ಣಾ ನದಿ ಪಕ್ಕದ ಸರ್ವೆ ನಂ.

92/2, 91/3, 96P, 97, 98 ಮತ್ತು 99, ಒಟ್ಟು 30.00 ಎಕರೆ ಪ್ರದೇಶದಲ್ಲಿ ಪ್ರತಿ ವರ್ಷಕ್ಕೆ 1,12,761 ಟನ್ ಸಾಮರ್ಥ್ಯದ ಮರಳು ಗಣಿಕಾರಿಕೆಯನ್ನು ಅರೆ-ಯಾಂತ್ರಿಕೃತ ಪದ್ಧತಿಯ (Semi-mechanised method) ಪ್ರಕಾರ ಆಯೋಜಿಸಿದ್ದು, ಯಾದಗಿರಿ ಜಿಲ್ಲೆಗೆ ಸಂಬಂಧಿಸಿದಂತೆ, ಪ್ರಸ್ಥಾಪಿಸಿರುವ ಯೋಜನೆಯ ಕುರಿತಾದ ಹಾಗೂ ಪರಿಸರದ ಮೇಲೆ ಆಗುವ ಪರಿಣಾಮಗಳ ಕುರಿತು ಸಾರ್ವಜನಿಕರಿಂದ ಅಹವಾಲುಗಳನ್ನು/ಸಲಹೆಗಳನ್ನು ಸ್ವೀಕರಿಸಲು, ದಿನಾಂಕ:04-04-2022ರಂದು ನಿಯೋಜಿತ ಸ್ಥಳ ಹೆಮ್ಮಡಗಿ ಗ್ರಾಮದಲ್ಲಿ, ಮದ್ಯಾಹ್ನ 12.00ಗಂಟೆಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಆಯೋಜಿಸಲಾಗಿದೆ ಎಂದು ತಿಳಿಸುತ್ತಾ ಜಿಲ್ಲೆಯ ವಿವಿಧ ಕಛೇರಿಗಳಾದ ಜಿಲ್ಲಾಧಿಕಾರಿಗಳ ಕಛೇರಿ, ಯಾದಗಿರಿ, ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿಗಳ ಕಾರ್ಯಾಲಯ ಜಿಲ್ಲಾ ಪಂಚಾಯತ್, ಯಾದಗಿರಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಯಾದಗಿರಿ, ತಾಲ್ಲೂಕ ಕಾರ್ಯ ನಿರ್ವಾಹಕ ಅಧಿಕಾರಿಗಳು ತಾಲ್ಲೂಕ ಪಂಚಾಯತ್ ಸುರಪುರ, ಜಿಲ್ಲಾ ಕೈಗಾರಿಕಾ ಕೇಂದ್ರ ಯಾದಗಿರಿ, ಗ್ರಾಮ ಪಂಚಾಯತಿ ಕಾರ್ಯಾಲಯ ಸೂಗುರು, ತಹಸೀಲ್ದಾರರು ಕಾರ್ಯಾಲಯ ಸುರಪುರ ಹಾಗೂ ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿ ಇವರುಗಳ ಕಾರ್ಯಾಲಯದಲ್ಲಿ ಯೋಜನೆಯ ಕಾರ್ಯಾಕಾರಿ ಸಾರಾಂಶ (ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿ), ಅಡಕ ಮುದ್ರಿಕೆ ಮತ್ತು ವರದಿಗಳನ್ನು ಸಾರ್ವಜನಿಕರ ಪರಾಮರ್ಶೆಗಾಗಿ 30ದಿನಗಳ ಮುಂಚಿತವಾಗಿ ಇರಿಸಲಾಗಿತ್ತು ಎಂದು ತಿಳಿಸಿದರು ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಅಧಿಸೂಚನೆಯನ್ನು ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ **"ಪ್ರಜವಾಣಿ"** ಹಾಗೂ **"ಇಂಡಿಯನ್ ಎಕ್ಸ್ ಪ್ರೆಸ್"** ಗಳಲ್ಲಿ ದಿ:05-03-2022ರಂದು ಅಧಿಸೂಚನೆಯ ಪ್ರಕಟಣೆಯನ್ನು ನೀಡಲಾಗಿತ್ತು ಹಾಗೂ ಸಾರ್ವಜನಿಕರಿಂದ ಅಹವಾಲುಗಳನ್ನು ಅಹ್ವಾನಿಸಲಾಗಿತ್ತು ಎಂದು ತಿಳಿಸುತ್ತಾ, ಸಭೆಯನ್ನು ಜರುಗಿಸಲು ಅನುಮತಿಸಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ವಿನಂತಿಸಿದರು.

ಸಭೆಯ ಆಧ್ಯಕ್ಷರು ಸಭೆಯನ್ನು ಉದ್ದೇಶಿಸುತ್ತಾ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್‌ನವರ ತಾಂತ್ರಿಕ ಸಲಹೆಗಾರರಿಗೆ ಉದ್ದೇಶಿತ ಯೋಜನೆಯ ತಾಂತ್ರಿಕ ವಿವರಗಳನ್ನು ಸಭೆಗೆ ಮಂಡಿಸುವಂತೆ ಸೂಚಿಸಿದರು. ಅದರಂತೆ, ಯೋಜನೆಯ ತಾಂತ್ರಿಕ ಸಲಹೆಗಾರರು ಯೋಜನೆಗೆ ಸಂಬಂಧಿಸಿದ ಅಂಶಗಳನ್ನು ಸಭೆಯಲ್ಲಿ ಮಂಡಿಸಿದರು.

ಸಭಾಧ್ಯಕ್ಷರು ಮಾತನಾಡುತ್ತಾ ಸಾರ್ವಜನಿಕರಲ್ಲಿ ಏನಾದರೂ ಸಲಹೆ, ಸೂಚನೆ, ಟೀಕೆ-ಟಿಪ್ಪಣಿ/ಅಹವಾಲುಗಳು ಇದ್ದಲ್ಲಿ ಮುಕ್ತವಾಗಿ ಲಿಖಿತ ರೂಪದಲ್ಲಾಗಲಿ ಅಥವಾ ಮೌಖಿಕವಾಗಿಯಾಗಲಿ ಸಭೆಯಲ್ಲಿ ಮಂಡಿಸುವಂತೆ ಹಾಗೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸುವಂತೆ ಸೂಚಿಸಿದರು.

ಅದರಂತೆ ಸಭೆಯಲ್ಲಿ ಹಾಜರಿದ್ದ ಈ ಕೆಳಕಂಡ ಗ್ರಾಮಸ್ಥರು ತಮ್ಮ ಅಭಿಪ್ರಾಯಗಳನ್ನು ಈ ಕೆಳಗಿನಂತೆ ವ್ಯಕ್ತ ಪಡಿಸಿದರು:

1) <u>ಶ್ರೀ ಬಸವರಾಜಪ್ಪ ಬಡಿಗೇರ, ಹೆಮ್ಮಡಗಿ ಗ್ರಾಮ :-</u> ಇವರು ಮಾತನಾಡುತ್ತಾ

a) ತಾವುಗಳು ಎಲ್ಲಾ ಸುತ್ತಮುತ್ತಲಿನ ಗ್ರಾಮಸ್ಥರು ಮತ್ತು ರೈತರ ಪರವಾಗಿ ಮಾತನಾಡುತ್ತಿರುವುದಾಗಿ ತಿಳಿಸುತ್ತಾ ಸದರಿ ಗಣಿಗಾರಿಕೆಯಿಂದ ರೈತರ ಪಂಪ್‌ಸೆಟ್‌ಗಳಿಗೆ ತೊಂದರೆಯಾಗುವುದಾಗಿ ತಿಳಿಸಿದರು.

b) ದನ-ಕರುಗಳಿಗೆ, ಪಕ್ಷಿಗಳಿಗೆ ಹಾಗೂ ಜಲ-ಚರ ಜೀವಿಗಳಿಗೆ ತೊಂದರೆಯಾಗುವುದಾಗಿ ತಿಳಿಸಿದರು.

c) ಸುರಪುರ ಪಟ್ಟಣದಿಂದ ಹೋಗಿ ಬರುವುದಕ್ಕೆ ಶಾಲಾ ಮಕ್ಕಳಿಗೆ, ಸಾರ್ವಜನಿಕರಿಗೆ ಮತ್ತು ಆಸ್ಪತ್ರಗೆ ಹೊಗುವವರಿಗೆ ರಸ್ತೆಯಿಂದ ಸಮಸ್ಯೆಯಾಗಿರುವುದಾಗಿ ತಿಳಿಸಿದರು.

d) ಗಣಿಗಾರಿಕೆಯಿಂದ ರೈತರ ಜಮೀನಿನಲ್ಲಿ ತೇವಾಂಶ ಕಡಿಮೆ ಯಾಗುವುದರಿಂದ ಇಳುವರಿಯು ಕುಂಠಿತಗೊಳ್ಳುತ್ತದೆ ಎಂದು ತಿಳಿಸಿದರು.

e) ಬೆಳೆಗಳ ಮೇಲೆ ಧೂಳು ಕೂಡುವುದರಿಂದ 10ವರ್ಷಗಳಿಂದ ಬೆಳೆಯ ಇಳುವರಿಯು ಕುಂಠಿತಗೊಂಡಿದ್ದು, ಇದಕ್ಕಾಗಿ ಪರಿಹಾರೋಪಾಯವನ್ನು ಕಂಡುಕೊಳ್ಳಬೇಕೇಂದು ತಿಳಿಸಿದರು.

f) ಹೆಮಮ್ಮಡಗಿ ಮತ್ತು ಸೂಗುರು ಗ್ರಾಮದಲ್ಲಿ ಅಳವಡಿಸಿರುವ ಕುಡಿಯುವ ನೀರಿನ ಪೈಪುಗಳು, ಚರಂಡಿಗಳು ಮತ್ತು ಒಳಚರಂಡಿಗಳು ಹಾಳಾಗಿರುವುದರಿಂದ ಗ್ರಾಮಸ್ಥರ ಬದುಕು ಹಾಳಾಗಿದೆ ಎಂದು ತಿಳಿಸಿದರು.

g) ಈ ರೀತಿಯ ಸಭೆಯನ್ನು ಆಯೋಜಿಸಲಾಗಿದೆ ಎಂಬ ವಿಷಯವು ಈ ದಿವಸವೆ ತಮಗೆ ಹಾಗೂ ಗ್ರಾಮಸ್ಥರಿಗೆ ಗೊತ್ತಾಗಿರುವುದಾಗಿ ತಿಳಿಸಿದರು.

h) ಸದರಿ ಆಲಿಕೆ ಸಭೆಯನ್ನು ಡಂಗೂರ ಸಾರುವ ಮೂಲಕ ತಿಳಿಸಿ 2-3ದಿವಸಗಳ ತರುವಾಯ ಆಯೋಜಿಸಿದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.

i) ಯೋಜನೆದಾರರು ಗಣಿಗಾರಿಕೆ ಸಂಬಂಧಿಸಿದಂತೆ, ಕಂಪನಿಯು ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಂಡಿದೆ ಎಂದು ತಿಳಿಸಿರುವುದರಿಂದ ಮರಳು ಸಾಗಾಣಿಕೆಯಲ್ಲಿ ಬರುವ ರೈತರ ಜಮೀನುಗಳಿಗೆ ಪರಿಹಾರವನ್ನು ನೀಡಬೇಕೇಂದು ತಿಳಿಸಿದರು.

<u>ಮಾನ್ಯ ಅಧ್ಯಕ್ಷರು ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ಉದ್ದೇಶಿಸುತ್ತಾ ಈ ಕೆಳಕಂಡ ಸೂಚನೆಗಳನ್ನು ನೀಡಿದರು :</u>

1. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು, ಸ್ಥಳೀಯ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು/ಕುಂದುಕೊರತೆಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸುವುದಕ್ಕಾಗಿ 3ದಿವಸಗಳ ಕಾಲಾವಕಾಶವನ್ನು ನೀಡುವಂತೆ ಸೂಚಿಸುತ್ತಾ, ಗ್ರಾಮ ಪಂಚಾಯಿತಿ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರಿಗೆ ಸಲ್ಲಿಸುವಂತೆ ಹಾಗೂ ಸದರಿ ಮನವಿಗಳನ್ನು ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ಆದೇಶಿಸಿದರು.
2. ಸೂಗುರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಸಾರ್ವಜನಿಕರಿಗೆ ಸದರಿ ವಿಷಯದ ಬಗ್ಗೆ ಡಂಗೂರ ಸಾರುವಂತೆ ಸೂಚಿಸುತ್ತಾ ಸಾರ್ವಜನಿಕರಿಂದ ಸ್ವೀಕೃತಿಯಾದ ಅಭಿಪ್ರಾಯಗಳ/ಕುಂದುಕೊರತೆಗಳ ಲಿಖಿತ ಮನವಿಗಳನ್ನು ಕ್ರೂಢಿಕರಿಸಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸುವಂತೆ ಆದೇಶಿಸಿದರು.
3. ಪ್ರಸ್ತುತ ಮರಳು ಬ್ಲಾಕ್‌ಗಳ ಹರಾಜನ್ನು ಮೇ॥ ಹಟ್ಟಿ ಗೋಲ್ಡ್ ಮೈನ್ ಕಂಪನಿಯವರಿಗೆ ನೀಡುವುದರಿಂದ, ಅನಧಿಕೃತ ಮರಳು ಗಣಿಗಾರಿಕೆಯನ್ನು ಸ್ಥಗಿತಗೊಳಿಸಬಹುದಾಗಿರುತ್ತದೆ ಹಾಗೂ ಈ ಪ್ರಕ್ರೀಯೆಯಿಂದ ಬರುವ ಆದಾಯವನ್ನು ಸರ್ಕಾರದ ಮುಖಾಂತರ ಜಿಲ್ಲಾ ಖನಿಜ ನಿಧಿಯಿಂದ ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಕ್ಕೆ ವಿನಿಯೋಗಿಸಲಾಗುವುದೆಂದು ತಿಳಿಸಿದರು.

4. ಇಂತಹ ಅಧಿಕೃತ ಮರಳು ಗಣಿಗಾರಿಕೆಯಿಂದ ಸರ್ಕಾರಕ್ಕೆ ಆದಾಯ ಉತ್ಪನ್ನವಾಗುತ್ತದೆ ಹಾಗೂ ಅನಧಿಕೃತ ಮರಳು ಗಣಿಗಾರಿಕೆಯಂತಹ ಚಟುವಟಿಕೆಗಳನ್ನು ನಿಲ್ಲಸಬಹುದಾಗಿರುತ್ತದೆ ಎಂದು ತಿಳಿಸಿದರು.
5. ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರಿಗೆ ಸಾರ್ವಜನಿಕರಿಂದ ಲಿಖಿತವಾಗಿ ಸಲ್ಲಿಕೆಯಾಗುವ ಆಕ್ಷೇಪಣೆಗಳು/ಅನಿಸಿಕೆಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸುವಂತೆ ಹಾಗೂ ಮಂಡಳಿಯು ಅಂತಹ ಎಲ್ಲಾ ಲಿಖಿತ ಮನವಿಗಳನ್ನು ನಡುವಳಿಯೊಂದಿಗೆ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ಆದೇಶಿಸಿದರು.

<u>ಮಂಡಳಿಯ ಹಿರಿಯ ಪರಿಸರ ಅಧಿಕಾರಿಗಳು, ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ಉದ್ದೇಶಿಸುತ್ತಾ ಈ ಕೆಳಕಂಡ ಅಂಶಗಳನ್ನು ವ್ಯಕ್ತಪಡಿಸಿದರು :</u>

1. ಪ್ರಸ್ತುತ ಮರಳು ಗಣಿಗಾರಿಕೆಯಿಂದ ಪರಿಸರದ ಮೇಲಾಗುವ ಪರಿಣಾಮಗಳನ್ನು ಅಕ್ಟೋಬರ್-2021ರಿಂದ ಡಿಸೆಂಬರ್-2021 (3-ತಿಂಗಳು)ರವರೆಗೆ ಅಭ್ಯಾಸಿಸಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ ಎಂದು ತಿಳಿಸಿದರು.
2. ಪರಿಸರ ಅಂದಾಜಿಕರಣ ಸಮಿತಿಯು ಸದರಿ ಯೋಜನೆಯನ್ನು ಪರಿಶೀಲಿಸಿದ ತರುವಾಯ ಯೋಜನೆದಾರರಿಗೆ TOR (Terms of Reference)ನ್ನು ನೀಡಿರುತ್ತದೆ.
3. ಸದರಿ ಮರಳು ಗಣಿಗಾರಿಕೆಯಿಂದ ಪರಿಸರ ಮಾಲಿನ್ಯ ಉಂಟಾಗದಿದ್ದರೂ ಸಹ ಇದರಿಂದ ಪರಿಸರ ಹಾಳಾಗುವುದು ಮತ್ತು ಜಲ-ಚರ ಜೀವಿಗಳ ಮೇಲೆ ಪರಿಣಾಮ ಬಿರುತ್ತದೆ ಎಂದು ತಿಳಿಸಿದಿರು.
4. ಜಲ-ಚರ ಜೀವಿಗಳ ಮೇಲೆ ಪರಿಣಾಮವನ್ನು ಕಡಿಮೆ ಮಾಡುವ ಹಿನ್ನಲೆಯಲ್ಲಿ ಕಂಪನಿಯು ವೈಜ್ಞಾನಿಕ ವಿಧಾನದ ಮರಳು ಗಣಿಗಾರಿಕೆಯನ್ನು ಆಯೋಜಿಸಿದೆ ಎಂದು ತಿಳಿಸಿದರು.
5. ಅವೈಜ್ಞಾನಿಕ ಮರಳು ಗಣಿಗಾರಿಕೆಯಿಂದ ಗುಂಡಿಗಳು ಉಂಟಾಗಿ ಜನರಿಗೆ ತೊಂದರೆ ಮತ್ತು ಸಾವುಗಳನ್ನು ಉಂಟು ಮಾಡುವುದನ್ನು ಗಮನದಲ್ಲಿರಿಸಿಕೊಂಡು ಸದರಿ ಕಂಪನಿಯವರು ಪರಿಸರದ ಮೇಲೆ ಹೆಚ್ಚಿನ ಪರಿಣಾಮವಾಗದಂತೆ ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿಕೊಂಡಿರುತ್ತಾರೆ.
6. ಗಣಿಗಾರಿಕೆಯ ಚಟುವಟಿಕೆಗಳ ಉಸ್ತುವಾರಿಯು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಜವಬ್ದಾರಿಯಾಗಿರುತ್ತದೆ ಎಂದು ತಿಳಿಸಿದರು.
7. ಅಂತಿಮವಾಗಿ, ಗ್ರಾಮಸ್ಥರು ಲಿಖಿತ ರೂಪದಲ್ಲಿ 3ದಿವಸದೊಳಗಾಗಿ ದೂರು-ದುಮ್ಮಾನುಗಳನ್ನು ಸಲ್ಲಿಸಿದಲ್ಲಿ ಅವುಗಳನ್ನು ಸಾಕ್ಷಿಯ ರೂಪದಲ್ಲಿ ಜಿಲ್ಲಾಧಿಕಾರಿಗಳ ಮುಖಾಂತರ ಮುಂದಿನ ಕ್ರಮಕ್ಕಗಿ ಕೇಂದ್ರ ಸಕಾರಕ್ಕೆ ಸಲ್ಲಿಸಲಾಗುತ್ತದೆ ಎಂದು ತಿಳಿಸಿದರು.

ಶ್ರೀ. ಸಣ್ಣವೆಂಕಟೇಶ ಸನಬಾಳ, ಉಪ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿ ಜಿಲ್ಲೆ ಇವರು ಮಾತನಾಡುತ್ತಾ ಸದರಿ ಸಭೆಯಲ್ಲಿ ಸ್ವೀಕೃತಿಯಾದ ಮತ್ತು ವ್ಯಕ್ತ ಪಡಿಸಲಾದ ಅನಿಸಿಕೆಗಳನ್ನು ಯತಾವತ್ತಾಗಿ ದಾಖಲಿಸಿ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲಾಗುವುದೆಂದು ತಿಳಿಸುತ್ತಾ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಪರಿಸರ ಸಾರ್ವಜನಿಕ ಸಭೆ, ಯಾದಗಿರಿ
ತಾ॥ & ಜಿ॥ ಜಿಲ್ಲೆ ಯಾದಗಿರಿ.